**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬಂಗಾರಪೇಟೆ**

**ಸಿಸಿ ಸಂಖ್ಯೆಃ** 927/2019

**ಚಾಸಾಃ 3 ಪ್ರಾಸಾಃ 2**

**ಸಾಕ್ಷಿಯನ್ನು ದಿನಾಂಕಃ 04-06-2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ವಿಜಯಮ್ಮ |
| ಗಂಡನ ಹೆಸರುಃ | ಕೃಷಃ್ಣಪ್ಪ |
| ವಯಸ್ಸುಃ | 47 |
| ವೃತ್ತಿಃ | ಕೂಲಿ |
| ವಾಸ ಸ್ಥಳಃ | ಬೈದಂಹಳ್ಳಿ |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ 1 ಮತ್ತು 2 ಹಾಗೂ ಆರೋಪಿತರ ಪರಿಚಯ ಇರುತ್ತದೆ, ಚಾಸಾ-1 ಮತ್ತು 2 ರವರು ನಮ್ಮದೇ ಊರಿನವರಾಗಿರುತ್ತಾರೆ. ಆರೋಪಿತರು ಹಾಗೂ ಚಾಸಾ1 ರವರ ಮಧ್ಯ ಮಧ್ಯೆ ಕೇವಲ ಬಾಯಿ ಮಾತಿನ ಜಗಳವಾಗಿದೆ. ಸದರಿ ಆರೋಪಿ ಚಾಸಾ-1 ರವರಿಗೆ ಯಾವುದೇ ರೀತಿ ಹೊಡೆ ಬಡೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ ಹಾಗೂ ಜೀವ ಬೆದರಿಕೆಯನ್ನು ಹಾಕಿಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲನ್ನು ನೋಡಿ ಗುರುತಿಸಿರುವುದಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಎ.ಪಿ.ಪಿ.ರವರು ಕೋರಿರುತ್ತಾರೆ. ಅದರಂತೆ ಅನುಮತಿ ನೀಡಿದೆ.)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕ - 29-09-2019 ರಂದು ಮಧ್ಯಾಹ್ನ ಸುಮಾರು 03-00 ಗಂಟೆಯಲ್ಲಿ ಚಾಸಾ1 ರವರು ಯಾಡಬೆಲೆ ಗ್ರಾಮದಲ್ಲಿರುವ ಅವರ ಮನೆಯಲ್ಲಿದ್ದಾಗ ಆರೋಪಿ 1 ಮತ್ತು 2 ರವರು ಚಾಸಾ-1 ರವರನ್ನು ಕುರಿತು ನಿನ್ನ ಗಂಡ ಎಲ್ಲಿ ಹೋಗಿದ್ದಾನೆ ಎಂದು ಕೇಳಿದ್ದು, ಅದಕ್ಕೆ ಚಾಸಾ-

1 ರವರು ಮನೆಯಲಿ ಇಲ್ಲ ಎಲ್ಲೋ ಹೋಗಿದ್ದಾರೆ ಅಂತ ಹೇಳಿದ್ದಕ್ಕೆ ಆರೋಪಿ –1 ರಮರ ಏಕಾಏಕಿ ಜಗಳ ಮಾಡಿ ಅಲ್ಲಿಯೇ ಇದ್ದ ಕೋಲನ್ನು ತೆಗೆದುಕೊಂಡು ಚಾಸಾ1 ರವರ ಎಡಗೈ, ಬಲಗೈ ಮೇಲೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿ –1 ರವರು ಚಾಸಾ–1 ರವರನ್ನು ಹಿಡಿದು ಎಳೆದಾಡಿ ಮೈಮೇಲೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ 3 ರವರು ಕೂಡ ಜಗಳ ಮಾಡಿ ಕೈಗಳಿಂದ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ4 ರವರು ಚಾಸಾ–1 ರವರು ಕುರಿತು ಸೂಳೆ ಮುಂಡೆಗೆ ಹೊಡೆದು ಹಾಕಿ ಎಂದು ಅವಾಚ್ಯ ಶಬ್ದಗಳಿಂದ ಬೈದಿರತ್ತೂರೆ ಎಂದರೆ ಸರಿಯಲ್ಲ. ನಂತರ ಆರೋಪಿತರೆಲ್ಲರೂ ಪುನಃ ಚಾಸಾ–1 ರವರನ್ನು ಕೈಗಳಿಂದ ಹೊಡೆದು, ಈ ಮುಂಡೆಯನ್ನು ಸಾಯಿಸದೇ ಬಿಡಬಾರದು ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ, ಅಷ್ಟರಲ್ಲಿ ನಾನು ಹಾಗೂ ಚಾಸಾ–2 ರವರು ಹೋಗಿ ಜಗಳ ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ. ಘಟನೆ ನನ್ನ ಸಮಕ್ಷಮವೇ ಜರುಗಿರುತ್ತೆ ಎಂದರೆ ಸರಿಯಲ್ಲ. ದಿಃ 01–10–2019 ರಂದು ನನ್ನ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ, ಸಾಕ್ಷಿಯು ಅಲ್ಲಗಳೆದ ಹೇಳಿಕೆಯನ್ನು ನಿ ಪಿ 2 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಪಾಟೀ ಸವಾಲು ಇರುವುದಿಲ್ಲ ಎಂದು ನಿವೇದಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**(ಸುಕೀತಾ ಎಸ್ ಹದ್ಲಿ)**
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬಂಗಾರಪೇಟೆ